**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:3**

**ಸ್ಪೆಷಲ್ ಕೇಸ್ ಸಂಖ್ಯೆ: 501/25 ಸಿಡಬ್ಲ್ಯೂ:4**

| | | |
|---|---|---|
| **ಸಾಕ್ಷಿದಾರರ ಹೆಸರು** | : | ನಾಗರಾಜ |
| **ತಂದೆ ಹೆಸರು** | : | ಕಾಳ |
| **ವಯಸ್ಸು** | : | **42** |
| **ವೃತ್ತಿ** | : | ಕೂಲಿ |
| **ವಾಸ** | : | ಕೆಂಚನೂರು |

**ದಿನಾಂಕ: 17-02-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಫಿರ್ಯಾದಿದಾರರ ಹಾಗೂ ಆರೋಪಿತರ ಪರಿಚಯ ಇದೆ. ಸತೀಶ್ ಕಂಚಗೋಡು ರವರು ನನ್ನ ಹತ್ತಿರ ತಾನು ರವೀಂದ್ರ ಶೇರುಗಾರ್ ರವರಿಂದ ಮಾವಿನಗುಳಿ ಹತ್ತಿರ ಜಾಗ ಖರೀದಿಸುತ್ತಿದ್ದೇನೆ ಆ ಜಾಗದ ಸರ್ವೇ ಇದ್ದು ಸರ್ವೇ ನಂತರ ಗಡಿ ಗುರುತು ಹಾಕಿ ಬೇಲಿ ಹಾಕಲು ಕೆಲಸದವರನ್ನು ಕರೆದುಕೊಂಡು ಬರುವಂತೆ ನನಗೆ ದಿನಾಂಕ:16-11-2024 ರಂದು ಹೇಳಿದ್ದು ಆ ಬಗ್ಗೆ ಸರ್ವೇ ನಂತರ ಜಾಗಕ್ಕೆ ಬೇಲಿ ಹಾಕಲು ನಾನು, ಚಂದ್ರಶೇಖರ ಗುಲ್ವಾಡಿ ಮತ್ತು ಕೆಲಸದವರು ಆ ಸ್ಥಳಕ್ಕೆ ಬೆಳಿಗ್ಗೆ ಹೋಗಿದ್ದೆವು. ನಾವು ಸದ್ರಿ ಸ್ಥಳಕ್ಕೆ ಹೋದಾಗ ಸತೀಶ್ ಕಂಚಗೋಡು, ರವೀಂದ್ರ ಶೇರುಗಾರ್, ಸರ್ವೇಯರ್, ಸುಬ್ರಾಯ ಶೇರುಗಾರ್, ನಾರಾಯಣ ಶೇರುಗಾರ್, ಗಣಪತಿ ಶೇರುಗಾರ್ ಎಲ್ಲರೂ ಇದ್ದರು. ಸರ್ವೇ ಮಾಡುವ ಸಮಯದಲ್ಲಿ ಆರೋಪಿತರು ಸರ್ವೇ ಮಾಡುವ ಕಾರ್ಯಕ್ಕೆ ಆಕ್ಷೇಪ ಮಾಡಿದರು. ಆಗ ಸತೀಶ್ ಕಂಚಗೋಡು ರವರು ರಸ್ತೆ ಮೇಲೆ ನಿಂತಿದ್ದರು ಆಗ ಆರೋಪಿತರು ಹೋಗಿ ಇದು ನಮ್ಮ ಶೇರುಗಾರ್ ಜಾತಿಯವರ ಜಾಗ, ನೀವು ಕೂಸಾಳು ಜಾತಿಯವರು ಇಲ್ಲಿ ಜಾಗ ತೆಗೆದುಕೊಳ್ಳುವುದು ಸರಿ ಅಲ್ಲಾ ನೀವು ನಿಮ್ಮ

ಕಾಲೋನಿಯಲ್ಲಿ ಜಾಗ ಖರೀದಿ ಮಾಡಿಕೊಳ್ಳಿ ನೀವು ಇಲ್ಲಿ ಬಲವಂತವಾಗಿ ಜಾಗ ತೆಗೆದುಕೊಂಡರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಅಂತ ಬೆದರಿಕೆ ಹಾಕಿದ್ದರು. ನಾನು ಕರೆದುಕೊಂಡು ಹೋದ ಕೆಲಸದವರಿಗೂ ಸಹಾ ಆರೋಪಿತರು ನೀವು ಕೂಸಾಳು ಜಾತಿಯವರು, ಕಾಗೆ ಹಾಗೆ ಗುಂಪು ಕಟ್ಟಿಕೊಂಡು ಬರುವವರು ಅಂತ ಕೂಗಾಡಿದರು. ಆಗ ಆರೋಪಿತರ ಸಂಬಂಧಿ ಹುಡುಗ ಶಯನ ಎಂಬ ಹುಡುಗ ಫೋಟೋ ತೆಗೆಯುವುದು ಮತ್ತು ವೀಡಿಯೋ ಮಾಡುವುದು ಮಾಡುತ್ತಿದ್ದ. ಆರೋಪಿತರ ವಿರುದ್ಧ ಫಿರ್ಯಾದಿದಾರರು ಬೈಂದೂರು ಠಾಣೆಯಲ್ಲಿ ದೂರು ನೀಡಿದ ವಿಷಯ ನನಗೆ ತಿಳಿದಿದೆ. ಪೋಲೀಸರು ಈ ಪ್ರಕರಣದಲ್ಲಿ ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದು, ಅವರೇ ಆ ದಿವಸ ಘಟನಾ ಸ್ಥಳದಲ್ಲಿದ್ದು ಫಿರ್ಯಾದಿದಾರ, ನನಗೆ ಮತ್ತು ನಾನು ಕರೆದುಕೊಂಡು ಹೋದ ಕೆಲಸಗಾರರಿಗೆ ಬೈದು ಜಾತಿ ನಿಂದನೆ ಮಾಡಿ ಜೀವ ಧಮಿಕಿ ಹಾಕಿದವರಾಗಿರುತ್ತಾರೆ.

<u>ಪಾಟೀ ಸವಾಲುಃ</u> ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ